UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Wednesday
03-06-2026

ಕನ್ನಡ ಕೃಷಿ ಪುಸ್ತಕ ಪ್ರಶಸ್ತಿಗೆ ಜಿಕೆವಿಕೆಯಿಂದ ಕೃತಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು (ಜಿಕೆವಿಕೆ) 2025ನೇ ಸಾಲಿನ ಕನ್ನಡ ಕೃಷಿ ಪುಸ್ತಕ ಪ್ರಶಸ್ತಿಗಾಗಿ ಕೃತಿಗಳನ್ನು ಆಹ್ವಾನಿಸಿದೆ. 2025ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರುವ ಕೃಷಿ ಸಂಬಂಧಿತ ಪುಸ್ತಕಗಳನ್ನು ಪ್ರಶಸ್ತಿ ಆಯ್ಕೆಗೆ ಕಳುಹಿಸಬಹುದು. ಲೇಖಕರಿಗೆ ಮಾತ್ರ ಪ್ರಶಸ್ತಿ ನೀಡಲಾಗುತ್ತದೆ. ಪುಸ್ತಕದ 3 ಪ್ರತಿಗಳನ್ನು ಜೂ.30ರ ಒಳಗೆ ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಂಗಳೂರು-560065ಕ್ಕೆ ಕಳುಹಿಸಬೇಕು. ವಿವರಗಳಿಗೆ http://uasbangalore.edu.in ಗೆ ಭೇಟಿ ನೀಡಬಹುದು. kannada.uas@gmail.com ಇ-ಮೇಲ್ ಅಥವಾ 080-23330153/373 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

Udayavani pg 05

ಕೃಷಿ ಪುಸ್ತಕ ಪ್ರಶಸ್ತಿ 2025ಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡದಲ್ಲಿ ಕೃಷಿ ಬರವಣಿಗೆಯನ್ನು ಉತ್ತೇಜಿಸುವ ಉದ್ದೇಶದಿಂದ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯವು ಪ್ರತಿ ವರ್ಷದಂತೆ ಈ ಬಾರಿಯೂ ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ-2025'ಕ್ಕೆ ಅರ್ಹ ಲೇಖಕರಿಂದ ಅರ್ಜಿಗಳನ್ನು ಆಹ್ವಾನಿಸಿದೆ. 2025ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರುವ ಕೃಷಿ ಸಂಬಂಧಿತ ಕನ್ನಡ ಪುಸ್ತಕಗಳನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಈ ಪ್ರಶಸ್ತಿಯು 10,000 ರು. ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ. ಆಸಕ್ತ ಕೃಷಿ ಲೇಖಕರು ನಿಗದಿತ ನಮೂನೆಯಲ್ಲಿ ತಮ್ಮ ಸ್ವ-ವಿವರಗಳೊಂದಿಗೆ ಪ್ರಶಸ್ತಿಗೆ ಸಲ್ಲಿಸುವ ಪುಸ್ತಕದ ಮೂರು ಪ್ರತಿಗಳನ್ನು 2026ರ ಜುಲೈ 30 ರೊಳಗೆ ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಬೆಂಗಳೂರು - 560 065 ಈ ವಿಳಾಸಕ್ಕೆ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗಾಗಿ 080-23330153 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

Viswavani pg 05

S-karnataka pg 07

ಕೃಷಿ ಕೋರ್ಸ್ ಪ್ರವೇಶಕ್ಕೆ ಅರ್ಜಿ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಚಿಂತಾಮಣಿಯ ರೇಷ್ಮೆ ಕೃಷಿ ಮಹಾವಿದ್ಯಾಲಯದಲ್ಲಿ 2026-27ನೇ ಸಾಲಿನ 2 ವರ್ಷಗಳ ಡಿಪ್ಲೊಮಾ (ಕೃಷಿ) ಕೋರ್ಸ್‌ಗೆ ಅಭ್ಯರ್ಥಿ ಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಜೂ. 30 ಕೊನೆಯ ದಿನವಾಗಿದೆ. ರೈತರ ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ.50 ರಷ್ಟು ಸೀಟುಗಳನ್ನು ಮೀಸಲಿಡಲಾಗಿದೆ. ಅರ್ಜಿ ಹಾಗೂ ಮಾಹಿತಿ ಪುಸ್ತಕವನ್ನು ವಿವಿಯ ವೆಬ್‌ಸೈಟ್ www.uasbangalore.edu.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

V-karnataka pg 07

ಕನ್ನಡ ಕೃಷಿ ಪುಸ್ತಕ ಪ್ರಶಸ್ತಿಗೆ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿವಿಯು ಪ್ರತಿ ವರ್ಷ ಕನ್ನಡದಲ್ಲಿ ಕೃಷಿ ಬರವಣಿಗೆಯನ್ನು ಪ್ರೋತ್ಸಾಹಿಸಲು 'ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ' ನೀಡುತ್ತಿದ್ದು, 2025ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರುವ ಕೃಷಿ ಸಂಬಂಧಿತ ಕನ್ನಡ ಪುಸ್ತಕಗಳನ್ನು ಆಹ್ವಾನಿಸಿದೆ.

ಪ್ರಶಸ್ತಿಯು 10 ಸಾವಿರ ರೂ. ನಗದು ಹಾಗೂ ಫಲಕ ಒಳಗೊಂಡಿದೆ. ಲೇಖಕರು ನಿಗದಿತ ನಮೂನೆಯಲ್ಲಿ ಪ್ರಶಸ್ತಿಗೆ ಸಲ್ಲಿಸುವ 3 ಪ್ರತಿಗಳನ್ನು ತಮ್ಮ ಸ್ವವಿವರಗಳೊಂದಿಗೆ ಜು.30ರೊಳಗೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿವಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು -65. ಇವರಿಗೆ ಕಳುಹಿಸುವುದು. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್: http://uasbangalore.edu.in ಗೆ ಭೇಟಿ ನೀಡುವುದು ಅಥವಾ kannada.uas@gmail.com ಮಿಂಚಂಚೆಗೆ ಸಂಪರ್ಕಿಸುವುದು. ದೂ. ಸಂ.: 080-23330153.

Hosadiganta pg 06

ಸುಗಂಧ ಸಸ್ಯದಿಂದ ಆರೋಗ್ಯವರ್ಧಕ ಉತ್ಪನ್ನ ತರಬೇತಿ

ಸಣ್ಣ ಉದ್ಯಮದಿಂದ ಆರ್ಥಿಕ ಪ್ರಗತಿ

ಬೆಂಗಳೂರು: ತರಬೇತಿ ಪಡೆಯುವುದ ಜತಗೆ ಅವುಗಳ ಬಳಕೆ ಮಾಡುವುದರಿಂದ ಸಣ್ಣ ಉದ್ದಿಮೆದಾರರಿಗೆ ಹೊರಹೊಮ್ಮಬಹುದು ಎಂದು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್ ತಿಳಿಸಿದರು.

ಬೆಂಗಳೂರುಕೃಷಿವಿವಿಯುಔಷಧಿಮತ್ತುಸುಗಂಧ ಸಸ್ಯಗಳ ಆರೋಗ್ಯವರ್ಧಕ ಉತ್ಪನ್ನಗಳ ತಯಾರಿಕೆ ಕುರಿತು ಜಿಕೆವಿಕೆ ಆವರಣದಲ್ಲಿ ಆಯೋಜಿಸಿದ್ದ ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ಜನಸಾಮಾನ್ಯರು ಸಾವಯವ ವಸ್ತುಗಳಿಗೆ ಹೆಚ್ಚು ಒಲವು ತೋರುತ್ತಿರುವುದರಿಂದ ಆದಷ್ಟು ಸಾವಯವ ಪದಾರ್ಥಗಳನ್ನು ಬಳಸಿ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುವುದರಿಂದ ಹೆಚ್ಚಿನ ಲಾಭ ಪಡೆಯಬಹುದು. ಔಷಧಿ ಗಿಡಗಳು ಮತ್ತು ಸುಗಂಧ ಸಸ್ಯಗಳನ್ನು ಬಳಸಿ ರಾಸಾಯನಿಕ ಮುಕ್ತ, ಆರೋಗ್ಯವರ್ಧಕ ಉತ್ಪನ್ನಗಳ ಉದ್ದಿಮೆದಾರರಾಗಬಹುದು ಎಂದರು.



ಅಧ್ಯಕ್ಷತೆ ವಹಿಸಿದ್ದ ಕೃಷಿ ಮಹಾವಿದ್ಯಾಲಯ (ಕೃಷಿ) ಡೀನ್ ಡಾ. ಎನ್.ಬಿ. ಪ್ರಕಾಶ್ ಮಾತನಾಡಿ, ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚು ಹೆಚ್ಚು ಭಾಗವಹಿಸಿ ಸದುಪಯೋಗ ಪಡೆದುಕೊಳ್ಳುವಂತೆ ತರಬೇತಿದಾರರಿಗೆ ತಿಳಿಸಿದರು.

ತರಬೇತಿ ಕಾರ್ಯಕ್ರಮದಲ್ಲಿ 34 ಜನ ಅಭ್ಯರ್ಥಿಗಳು ಪಾಲ್ಗೊಂಡಿದ್ದು, ರೋಸ್‌ಮೇರಿ ಮತ್ತು ಲ್ಯಾವೆಂಡರ್ ಇತ್ಯಾದಿ ಸುಗಂಧದ್ರವ್ಯ ಸಸ್ಯಗಳನ್ನು ಬಳಸಿ ಸೋಪು, ಲಿಪ್‌ಬಾಮ್ ಮತ್ತು ಬಾತ್ ಸಾಲ್ಟ್ ಉತ್ಪನ್ನಗಳನ್ನು ತಯಾರಿಸುವುದರ ಬಗ್ಗೆ ಮಾಹಿತಿ ಪಡೆದರು. ಜತೆಗೆ ತಾವೇ ಸ್ವತಃ ಎಲ್ಲಾ ಅಭ್ಯರ್ಥಿಗಳು ಕೈ ಜೋಡಿಸಿ ಉತ್ಪನ್ನಗಳನ್ನು ತಯಾರಿಸಿ ಬಳಸುವ ಮೂಲಕ ತರಬೇತಿಯ ಸದುಪಯೋಗಪಡೆದರು.

V-karnataka pg 07

'ಸುಗಂಧ ಸಸ್ಯಗಳ ಉತ್ಪನ್ನ ತಯಾರಿಸಿ ಉದ್ದಿಮೆದಾರರಾಗಿ'

■ **ವಿಕ ಸುದ್ದಿಲೋಕ** ಬೆಂಗಳೂರು

''ಔಷಧಿ ಗಿಡಗಳು ಮತ್ತು ಸುಗಂಧ ಸಸ್ಯಗಳನ್ನು ಬಳಸಿ ರಾಸಾಯನಿಕ ಮುಕ್ತ, ಆರೋಗ್ಯವರ್ಧಕ ಉತ್ಪನ್ನಗಳ ಉದ್ದಿಮೆದಾರರಾಗಬಹುದು'' ಎಂದು ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ ಕರೆ ನೀಡಿದರು.

ಬೆಂಗಳೂರು ಕೃಷಿ ವಿವಿಯು 'ಔಷಧಿ ಮತ್ತು ಸುಗಂಧ ಸಸ್ಯಗಳ ಆರೋಗ್ಯವರ್ಧಕ ಉತ್ಪನ್ನಗಳ ತಯಾರಿಕೆ' ಕುರಿತು ಜಿಕೆವಿಕೆ ಆವರಣದಲ್ಲಿ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಂಗಳವಾರ ಅವರು ಮಾತನಾಡಿದರು.

''ಇತ್ತೀಚೆಗೆ ಜನಸಾಮಾನ್ಯರು ಸಾವಯವ ವಸ್ತುಗಳಿಗೆ ಹೆಚ್ಚು ಒಲವು ತೋರುತ್ತಿರುವುದರಿಂದ ಆದಷ್ಟು ಸಾವಯವ ಪದಾರ್ಥಗಳನ್ನು ಬಳಸಿ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುವುದರಿಂದ ಹೆಚ್ಚಿನ ಲಾಭ ಪಡೆಯಬಹುದು,'' ಎಂದರು.



ಅಧ್ಯಕ್ಷತೆ ವಹಿಸಿದ್ದ ಕೃಷಿ ಮಹಾವಿದ್ಯಾಲಯದ ಡೀನ್ ಡಾ. ಎನ್.ಬಿ. ಪ್ರಕಾಶ್ ಮಾತನಾಡಿ, ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚು ಹೆಚ್ಚು ಭಾಗವಹಿಸಿ ಸದುಪಯೋಗ ಪಡೆದುಕೊಳ್ಳುವಂತೆ ತರಬೇತಿದಾರರಿಗೆ ಸಲಹೆ ಮಾಡಿದರು.

ತರಬೇತಿ ಕಾರ್ಯಕ್ರಮದಲ್ಲಿ 34 ಅಭ್ಯರ್ಥಿಗಳು ಪಾಲ್ಗೊಂಡಿದ್ದರು. ರೋಸ್ ಮೇರಿ ಮತ್ತು ಲ್ಯಾವೆಂಡರ್ ಮತ್ತಿತರ ಸುಗಂಧದ್ರವ್ಯ ಸಸ್ಯಗಳನ್ನು ಬಳಸಿ ಸೋಪು, ಲಿಪ್‌ಬಾಮ್ ಮತ್ತು ಬಾತ್ ಸಾಲ್ಟ್ ಉತ್ಪನ್ನಗಳನ್ನು ತಯಾರಿಸುವುದರ ಬಗ್ಗೆ ಮಾಹಿತಿ ಪಡೆದರು. ಜತೆಗೆ, ಎಲ್ಲಾ ಅಭ್ಯರ್ಥಿಗಳು ತಾವೇ ಸ್ವತಃ ಕೈಜೋಡಿಸಿ ಉತ್ಪನ್ನಗಳನ್ನು ತಯಾರಿಸಿ ಬಳಸುವ ಮೂಲಕ ತರಬೇತಿಯ ಸದುಪಯೋಗ ಪಡೆದರು.

ಕಾರ್ಯಕ್ರಮದಲ್ಲಿಕೃಷಿ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಡಾ. ಮೂಡಲಗಿರಿಯಪ್ಪ ಮತ್ತು ವಿಸ್ತರಣಾ ನಿರ್ದೇಶಕ ಡಾ. ವೈ.ಎನ್. ಶಿವಲಿಂಗಯ್ಯ, ತೋಟಗಾರಿಕೆ ವಿಭಾಗದ ಪ್ರಾಧ್ಯಾಪಕ ಡಾ. ಕೆ.ಎನ್. ಶ್ರೀನಿವಾಸಪ್ಪ ಉಪಸ್ಥಿತರಿದ್ದರು.

ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ-2025ಕ್ಕೆ ಆಹ್ವಾನ

ಬೆಂಗಳೂರು: ಕೃಷಿ ವಿಶ್ವವಿದ್ಯಾನಿಲಯದಿಂದ ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ-2025ಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಕೃಷಿ ವಿಶ್ವವಿದ್ಯಾನಿಲಯ ಪ್ರತಿ ವರ್ಷ ಕನ್ನಡದಲ್ಲಿ ಕೃಷಿ ಬರವಣಿಗೆಯನ್ನು ಪ್ರೋತ್ಸಾಹಿಸಲು ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ ನೀಡುತ್ತಿದೆ. 2025ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರುವ ಕೃಷಿ ಸಂಬಂಧಿತ ಕನ್ನಡ ಪುಸ್ತಕಗಳನ್ನು ಲೇಖಕರಿಂದ ಆಹ್ವಾನಿಸಿದೆ. ಪ್ರಶಸ್ತಿಯು 10 ಸಾವಿರ ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ. ಆಸಕ್ತ ಲೇಖಕರು ನಿಗದಿತ ನಮೂನೆಯಲ್ಲಿ ಪ್ರಶಸ್ತಿಗೆ ಸಲ್ಲಿಸುವ ಮೂರು ಪ್ರತಿಗಳನ್ನು ತಮ್ಮ ಸ್ವ ವಿವರಗಳೊಂದಿಗೆ ಜುಲೈ 30ರೊಳಗೆ ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಗಾ.ಕೃ.ವಿ.ಕೇ., ಬೆಂಗಳೂರು-560 065 ಇವರಿಗೆ ಕಳುಹಿಸಬೇಕೆಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ http://uasbangalore.edu.in ಅಥವಾ kannada.uasgmail.com ಸಂಪರ್ಕಿಸುವುದು ಹಾಗೂ ದೂರವಾಣಿ 080-23330153 ವಿಸ್ತರಣೆ 373 ಸಂಪರ್ಕಿಸುವುದು.

Vijayavani Pg 03

ವಿಜಯವಾಣಿ

ನಂ.1 ಕನ್ನಡ ದಿನಪತ್ರಿಕೆ

945 ಕೃಷಿ ಅಧಿಕಾರಿಗಳ ಹುದ್ದೆಗಳಿಗೆ ನೇಮಕಾತಿ

ಬೆಂಗಳೂರು: ಕೃಷಿ ಇಲಾಖೆಯಲ್ಲಿನ ಗ್ರೂಪ್-ಬಿ ವೃಂದದ ಹುದ್ದೆಗಳಾದ ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಪರಿಷ್ಕೃತ ಅಧಿಸೂಚನೆ ಪ್ರಕಟಿಸಿದೆ. ಪರಿಷ್ಕೃತ ಅಧಿಸೂಚನೆಯಲ್ಲಿ ಹುದ್ದೆಗಳ ಸಂಖ್ಯೆಯು ಈ ಹಿಂದಿದ್ದ 890ರಿಂದ 945ಕ್ಕೆ ಏರಿಕೆಯಾಗಿದೆ. ಇದರಲ್ಲಿ 18 ಹಿಂಬಾಕಿ ಹುದ್ದೆಗಳು ಸೇರಿವೆ. ಉಳಿಕೆ ಮೂಲವೃಂದಕ್ಕೆ ಒಟ್ಟಾರೆ 672 ಹುದ್ದೆಗಳಿದ್ದರೆ, ಕಲ್ಯಾಣ ಕರ್ನಾಟಕ ವೃಂದದಲ್ಲಿ 273 ಹುದ್ದೆಗಳನ್ನು ಗುರುತಿಸಲಾಗಿದೆ. ಅರ್ಜಿ ಸಲ್ಲಿಸಲು ಜೂ.20 ಕೊನೆಯ ದಿನವಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಯನ್ನು ಜು.27ರಂದು ನಡೆಸಲು ನಿರ್ಧರಿಸಲಾಗಿದೆ. ಒಟ್ಟು ಹುದ್ದೆಗಳಲ್ಲಿ ಶೇ.85 ಬಿಎಸ್‌ಸಿ ಕೃಷಿ, ಬಿಎಸ್‌ಸಿ (ಆನರ್ಸ್) ಕೃಷಿ ಪದವೀಧರರಿಗೆ ಮೀಸಲಿಡಲಾಗಿದೆ. ಇನ್ನುಳಿದ ಶೇ.15 ಹುದ್ದೆಗಳಿಗೆ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ, ಕೃಷಿ ಮಾರುಕಟ್ಟೆ ಮತ್ತು ಸಹಕಾರ, ಅಗ್ರಿ ಬಿಜಿನೆಸ್ ಮ್ಯಾನೇಜ್‌ಮೆಂಟ್, ಜೈವಿಕ ತಂತ್ರಜ್ಞಾನ, ಅಗ್ರಿಕಲ್ಚರ್ ಇಂಜಿನಿಯರಿಂಗ್, ಕೃಷಿ ಜೈವಿಕ ತಂತ್ರಜ್ಞಾನ ಸೇರಿ ಕೃಷಿಯಲ್ಲಿ ಬಿ.ಟೆಕ್, ಬಿಎಸ್‌ಸಿ ಆನರ್ಸ್, ಬಿಎಸ್‌ಸಿ ಪದವಿ ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ಗೆ ಭೇಟಿ ನೀಡಿ, ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದು.

■ ಅರ್ಜಿ ಸಲ್ಲಿಕೆಗೆ ಜೂ.20 ಕೊನೆಯ ದಿನ

Bengaluru Edition
Jun 03, 2026 Page No. 5

ರೈತರ ಹಿತಕ್ಕಾಗಿ ಸಮಗ್ರ ರಾಷ್ಟ್ರೀಯ ಅಭಿಯಾನ



ಖೇತ್ ಬಚಾವೋ
ರಾಸಾಯನಿಕ ರಸಗೊಬ್ಬರ ಬಳಕೆ ಕಡಿತ, ಕೃಷಿಭೂಮಿ ಪುನಶ್ಚೇತನದ ಗುರಿ

ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐಸಿಎಆರ್) ಮತ್ತು ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಜಂಟಿಯಾಗಿ ಖೇತ್ ಬಚಾವೋ ಅಭಿಯಾನಕ್ಕೆ ಚಾಲನೆ ನೀಡಿವೆ. ಮಣ್ಣು ಪರೀಕ್ಷೆ ಆಧಾರಿತ ಪೋಷಕಾಂಶಗಳ ನಿರ್ವಹಣೆಯ ಮೂಲಕ ಸುಸ್ಥಿರ ಕೃಷಿಯನ್ನು ಉತ್ತೇಜಿಸುವ ಮತ್ತು ಯೂರಿಯಾದಂತಹ ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಗುರಿಯನ್ನು ಈ ಅಭಿಯಾನ ಹೊಂದಿದೆ. ಆ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.



ಏನಿದು ಖೇತ್ ಬಚಾವೋ?

ಖೇತ್ ಬಚಾವೋ ಅಭಿಯಾನವನ್ನು ಜಮೀನುಗಳು, ರೈತರು ಮತ್ತು ಗ್ರಾಮಗಳನ್ನು ಜೋಡಿಸುವ ಒಂದು ಸಮಗ್ರ ರಾಷ್ಟ್ರೀಯ ಅಭಿಯಾನ ಎಂದು ವಿವರಿಸಲಾಗಿದೆ. ಈ ಯೋಜನೆಯನ್ನು ಅತಿಯಾದ ರಾಸಾಯನಿಕ ಗೊಬ್ಬರ ಬಳಕೆ, ಕುಸಿಯುತ್ತಿರುವ ಮಣ್ಣಿನ ಸಾರಾಂಶ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಸಲಹಾ ಸೇವೆಗಳ ಸೀಮಿತ ಲಭ್ಯತೆ ಎಂಬ ಮೂರು ಪ್ರಮುಖ ಸವಾಲುಗಳನ್ನು ಎದುರಿಸಲು ವಿನ್ಯಾಸಗೊಳಿಸಲಾಗಿದೆ. ಈ ಅಭಿಯಾನ, ಸಾಂಪ್ರದಾಯಿಕ ಭಾರತೀಯ ಕೃಷಿ ಜ್ಞಾನವನ್ನು ಆಧುನಿಕ ಕೃಷಿ ವಿಜ್ಞಾನದೊಂದಿಗೆ ಸಂಯೋಜಿಸುತ್ತದೆ. ಇದರ ಅನುಷ್ಠಾನದಲ್ಲಿ ಪಂಚಾಯತ್‌ಗಳು, ಕೃಷಿ ವಿಜ್ಞಾನ ಕೇಂದ್ರಗಳು(ಕೆವಿಕೆ), ಐಸಿಎಆರ್ ಸಂಸ್ಥೆಗಳು, ರಾಜ್ಯ ಸರ್ಕಾರಗಳು ಮತ್ತು ಕೃಷಿ ಇಲಾಖೆಗಳು ಭಾಗಿಯಾಗಿದ್ದು, ಇದು ಇತ್ತೀಚಿನ ವರ್ಷಗಳಲ್ಲಿ ಜಾರಿಯಾಗುತ್ತಿರುವ ಅತ್ಯಂತ ವಿಶಾಲ ಸಾಂಸ್ಥಿಕ ಕೃಷಿ ಸಂಪರ್ಕ ಕಾರ್ಯಕ್ರಮಗಳಲ್ಲಿ ಒಂದು.

ಮಣ್ಣಿನ ಆರೋಗ್ಯಕ್ಕೆ ಪ್ರಯೋಜನಗಳು

ರೈತರು ಒಟ್ಟುಬೆಸಾಯದವೆಚ್ಚದಲ್ಲಿರಾಸಾಯನಿಕರಸಗೊಬ್ಬರಗಳಪಾಲೇಹೆಚ್ಚು, ಮಣ್ಣು ಪರೀಕ್ಷೆ ಆಧಾರಿತ ಅನ್ವಯಗಳು ಮತ್ತು ನ್ಯಾನೋ-ರಸಗೊಬ್ಬರಗಳಿಗೆ ಬದಲಾಗುವುದರಿಂದ ರೈತರ ಇಂತಹ ವೆಚ್ಚಗಳು ಕಡಿಮೆಯಾಗಲಿವೆ ಮತ್ತು ನಿವ್ವಳ ಲಾಭದ ಪ್ರಮಾಣ ಸುಧಾರಿಸಲಿದೆ. ಯೂರಿಯಾದ ಮೇಲಿನ ಅತಿಯಾದ ಅವಲಂಬನೆಯಿಂದಾಗಿ ಮಣ್ಣಿನ ನೈಸರ್ಗಿಕ ಸೂಕ್ಷ್ಮಜೀವಿಗಳು ನಾಶವಾಗಿ, ಕಾಲಕ್ರಮೇಣ ಫಲವತ್ತತೆ ಕುಸಿದು ಉಂಟಾಗಿರುವ ದೀರ್ಘಕಾಲೀನ ಮಣ್ಣಿನ ಸವಕಳಿಯನ್ನು ತಡೆಯುವುದೂ ಸಹ ಈ ಅಭಿಯಾನದ ಗುರಿಯಾಗಿದೆ. ಪರಿಸರದ ದೃಷ್ಟಿಯಿಂದ, ಅತಿಯಾದ ರಾಸಾಯನಿಕ ಹರಿವು ಸ್ಥಳೀಯ ಜಲಮೂಲಗಳನ್ನು ಮತ್ತು ಅಂತರ್ಜಲವನ್ನು ಕಲುಷಿತಗೊಳಿಸುತ್ತಿದ್ದು, ಪಾದರಸ(ಎಚ್‌ಜಿ), ಕ್ಯೂಮಿಯಂ (ಸಿಆರ್) ಮತ್ತು ಕ್ಯಾಡ್ಮಿಯಂ (ಸಿಡಿ) ಸೇರಿದಂತೆ ಹಾನಿಕಾರಕ ಭಾರ ಲೋಹಗಳ ಪ್ರಮಾಣ ಹೆಚ್ಚಿದೆ. ಖೇತ್ ಬಚಾವೋ ಅಭಿಯಾನ, ಕೃಷಿಯಲ್ಲಿ ರಾಸಾಯನಿಕಗಳ ಅತಿಯಾದ ಬಳಕೆಯನ್ನು ಕಡಿಮೆ ಮಾಡುವ ಮೂಲಕ ಗ್ರಾಮದ ಜಲ ಪರಿಸರ ವ್ಯವಸ್ಥೆಗಳನ್ನು ರಕ್ಷಿಸುವ ಉದ್ದೇಶ ಹೊಂದಿದೆ. ರೈತರು ಬೀಜ, ನೀರಾವರಿ ಮತ್ತು ಕೊಯ್ಲು ಕುರಿತು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಕಾಲಿಕ ಡಿಜಿಟಲ್ ಸಲಹೆಗಳನ್ನು ಈ ಮೂಲಕ ಪಡೆಯಲಿದ್ದಾರೆ.

ವ್ಯಾಪಕ ಪ್ರಾಮುಖ್ಯತೆ

ಈ ಅಭಿಯಾನದ ಪಂಚಾಯತ್-ಕೇಂದ್ರಿತ ವಿಧಾನ ಭಾರತದಲ್ಲಿ ಕೃಷಿ ಸಲಹಾ ಸೇವೆಗಳನ್ನು ತಲುಪಿಸುವ ವಿಧಾನದಲ್ಲಿ ಮಹತ್ವದ ಬದಲಾವಣೆಯನ್ನು ಸೂಚಿಸುತ್ತದೆ. ಇದರ ಅವರೋಹಣ ರೂಪದಿಂದ ಗ್ರಾಮಮಟ್ಟದಲ್ಲಿ ಹೆಚ್ಚಿನ ಅಧಿಕಾರ ಸಿಗುತ್ತದೆ ಮತ್ತು ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆ. ಕೃಷಿಗೆ ಸಂಬಂಧಿಸಿದ ಹಲವು ಸವಾಲುಗಳಿಗೆ ಒಂದೇ ವೇದಿಕೆಯಲ್ಲಿ ಪರಿಹಾರ ಒದಗಿಸುವ ಪ್ರಯತ್ನ ಇದಾಗಿದೆ.

ಪೂರಕ ಸರ್ಕಾರಿ ಯೋಜನೆಗಳು

ಖೇತ್ ಬಚಾವೋ ಅಭಿಯಾನ, ಹಲವಾರು ಆಸ್ತಿತ್ವದಲ್ಲಿರುವ ಕೇಂದ್ರ ಸರ್ಕಾರದ ಕಾರ್ಯಕ್ರಮಗಳೊಂದಿಗೆ ಒಟ್ಟಾಗಿ ಕಾರ್ಯನಿರ್ವಹಿಸುತ್ತದೆ. ಪಿಎಂ-ಪ್ರಣಾಮ್ ಯೋಜನೆ ಪ್ರೋತ್ಸಾಹಕ ಆಧಾರಿತ ಮಾದರಿಯನ್ನು ಒದಗಿಸುತ್ತದೆ, ಇದರಲ್ಲಿ ಯೂರಿಯಾ ಮತ್ತು ಡಿಎಪಿಯಂತಹ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಯಶಸ್ವಿಯಾಗಿ ಕಡಿಮೆ ಮಾಡುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು, ಅದರಿಂದ ಉಂಟಾಗುವ ಉಳಿತಾಯದ ಶೇ.50ರಷ್ಟನ್ನು ಕೇಂದ್ರ ಸರ್ಕಾರದಿಂದ ಅನುದಾನವಾಗಿ ಮರಳಿ ಪಡೆಯುತ್ತವೆ. ಈ ಅನುದಾನವನ್ನು ಗ್ರಾಮ ಮಟ್ಟದಲ್ಲಿ ಪರ್ಯಾಯ, ಸಾವಯವ ಮತ್ತು ಜೈವಿಕ ಗೊಬ್ಬರ ಉತ್ಪಾದನೆಯ ಮೂಲಸೌಕರ್ಯಗಳನ್ನು ಸ್ಥಾಪಿಸಲು ಬಳಸಲಾಗುತ್ತದೆ. ಸ್ವಸ್ಥ ಧರಾ, ಖೇತ್ ಹರಾ ಎಂಬ ಘೋಷವಾಕ್ಯದಲ್ಲಿ ಪ್ರಾರಂಭಿಸಲಾದ ಮಣ್ಣಿನ ಆರೋಗ್ಯ ಕಾರ್ಡ್(ಎಸ್‌ಎಚ್‌ಸಿ) ಯೋಜನೆ, ಪರಂಪರಾಗತ್ ಕೃಷಿ ವಿಕಾಸ್ ಯೋಜನೆಗೂ(ಪಿಕೆವೈ) ಇದು ಪೂರಕವಾಗಿದೆ

ಯೋಜನೆಯ ಪ್ರಮುಖ ಸ್ತಂಭಗಳು

ಈ ಅಭಿಯಾನ, ಐದು ಪ್ರಮುಖ ಕಾರ್ಯತಂತ್ರಗಳ ಮೂಲಕ ಕಾರ್ಯನಿರ್ವಹಿಸುತ್ತದೆ. ಮೊದಲನೆಯದಾಗಿ, ಇದು ರೈತರಿಗೆ ಮಣ್ಣು ಪರೀಕ್ಷೆ ನಡೆಸಲು ಮತ್ತು ಅವರ ಭೂಮಿಗೆ ಅಗತ್ಯವಿರುವ ನಿರ್ದಿಷ್ಟ ಪೋಷಕಾಂಶಗಳನ್ನು ಮಾತ್ರ ಬಳಸಲು ತರಬೇತಿ ನೀಡುತ್ತದೆ. ಇದನ್ನು ಮಣ್ಣು ಪರೀಕ್ಷೆ ಆಧಾರಿತ ಪೋಷಕಾಂಶ ನಿರ್ವಹಣೆ ಎನ್ನಲಾಗುತ್ತದೆ. ಎರಡನೆಯದಾಗಿ, ಇದು ಸಾಂಪ್ರದಾಯಿಕ ಯೂರಿಯಾಕ್ಕೆ ಪರ್ಯಾಯವಾಗಿ ನ್ಯಾನೋ ಯೂರಿಯಾ ಮತ್ತು ಜೈವಿಕ ಗೊಬ್ಬರಗಳನ್ನು ಉತ್ತೇಜಿಸುತ್ತದೆ, ಇವುಗಳು ವೆಚ್ಚ ತಗ್ಗಿಸುವ ಜತೆಗೆ ಪರಿಸರ ಸ್ನೇಹಿ ಎಂದು ಪರಿಗಣಿಸಲಾಗಿದೆ. ಮೂರನೆಯದಾಗಿ, ಸ್ಥಳೀಯ ಪಂಚಾಯತ್‌ಗಳನ್ನು ಮಾಹಿತಿ ಕೇಂದ್ರಗಳಾಗಿ ಸಬಲೀಕರಣಗೊಳಿಸಲಾಗುತ್ತಿದ್ದು, ಇದು ದೂರದ ಪ್ರದೇಶದ ರೈತರಿಗೂ ಕೃಷಿ ಪರಿಣತಿ ಒದಗಿಸುತ್ತದೆ. ನಾಲ್ಕನೆಯದಾಗಿ, ರೈತರು ನೈಜ-ಸಮಯದ, ಸ್ಥಳೀಯ ಹವಾಮಾನ ನವೀಕರಣ ಮತ್ತು ಬೆಳೆ ಸಲಹೆಗಳನ್ನು ಪಡೆಯಲಿದ್ದು, ಇದು ಹವಾಮಾನ ವೈಪರೀತ್ಯದ ಅಪಾಯಗಳನ್ನು ನಿರ್ವಹಿಸಲು ಸಹಾಯ ಮಾಡುತ್ತದೆ. ಐದನೆಯದಾಗಿ, ಈ ಅಭಿಯಾನ, ಆಸ್ತಿತ್ವದಲ್ಲಿರುವ ಸರ್ಕಾರಿ ಯೋಜನೆಗಳ ಲಾಭ ಪಡೆಯುವುದನ್ನು ಸುಗಮಗೊಳಿಸುತ್ತದೆ. ಇದರಿಂದಾಗಿ ಸಬ್ಸಿಡಿಗಳು, ಗುಣಮಟ್ಟದ ಬೀತ್ತನೆ ಬೀಜಗಳು ಮತ್ತು ತಂತ್ರಜ್ಞಾನ ಉಪಕರಣಗಳು ಯಾವುದೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ಗ್ರಾಮಗಳನ್ನು ತಲುಪುತ್ತವೆ. ಈ ಅಭಿಯಾನ ಪಿಎಂ-ಕಿಸಾನ್, ಕಿಸಾನ್ ಕ್ರೆಡಿಟ್ ಕಾರ್ಡ್, ಬೇಳೆಕಾಳುಗಳು-ಎಣ್ಣೆಕಾಳುಗಳ ಮಿಷನ್, ಆಯಿಲ್ ಪಾಮ್ ಮಿಷನ್, ಹತ್ತಿ ಮಿಷನ್, ಯಾಂತ್ರೀಕರಣ ಬೆಂಬಲ ಮತ್ತು ಜಲ ಸಂರಕ್ಷಣಾ ಉಪಕ್ರಮಗಳು ಸೇರಿದಂತೆ ಆಸ್ತಿತ್ವದಲ್ಲಿರುವ ಪ್ರಮುಖ ಯೋಜನೆಗಳನ್ನು ಸಂಯೋಜಿಸುತ್ತದೆ.

Hosadiganta pg 06

Hindu pg 07

Extreme heat tests India's record milk production


NEWS ANALYSIS

Reuters
NEW DELHI

During a summer of extreme heat with temperature topping 40 degrees Celsius last year, much like northern India is currently experiencing, dairy farmer Neeraj Bharadwaj watched one of his cows deliver a calf months early.

The newborn was tiny and almost hairless. People said it would not survive, but Bharadwaj bottle fed it milk until it slowly recovered.

Scientists say such premature births are part of a wider pattern of increasingly intense summers linked to climate change.



Heat stress reduces feed intake and diverts cows' energy.

Bharadwaj's small farm of six cows near Delhi is typical of millions in India, the world's biggest dairy producer responsible for almost a quarter of global supply where most milk comes from farms with between 2-5 animals.

5% of GDP

Dairy sector accounts for about 5% of India's GDP and supports more than 80 million farmers. Rising incomes and population level mean demand for dairy is set to grow - the government estimates it could almost double by 2050.

But extreme heat means cows eat less, make less milk, struggle to conceive and produce fewer live offspring, experts say, while farmers spend more trying to keep animals cool and fertile. "Milk production falls by nearly 30% during extreme heat," Bharadwaj said.

Record output

India's milk production reached a record 239 million tonne in the 2023-24 fiscal year, up nearly 64% in a decade, according to government data.

But researchers, dairy experts and farmers say rising heat is quietly exposing the vulnerabilities of that model. Scientists at the National Dairy Research Institute said heat stress reduces feed intake and diverts cows' energy away from milk production and reproduction.

Bharadwaj spent some ₹2 lakh modifying cattle sheds with tarpaulin covers and ventilation systems to cut heat stress while yearly maintenance added another ₹50,000.

Pankaj Navani, a dairy entrepreneur, said larger organised dairy operators adapted more quickly because they treat dairy as a commercial business, investing in cooling systems, ventilation and feed management. But such investment is hard for most dairy farmers operating with only a handful of cattle and limited capital.

ರಾಜ್ಯಾದ್ಯಂತ 742 ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜ ವಿತರಣೆ

ಮುಂಗಾರಿಗೆ ಬಿತ್ತನೆ ಬೀಜ ರೆಡಿ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesofindia.com

ಈ ಬಾರಿ ಮುಂಗಾರು ಆಗಮನ ಕೊಂಚ ತಡವಾಗಿದೆ. ಆದರೆ, ಮೇ ತಿಂಗಳ ಕೊನೆಯಲ್ಲಿ ನಿರೀಕ್ಷೆಗೂ ಮೀರಿ ಪೂರ್ವ ಮುಂಗಾರು ಮಳೆ ಸುರಿದಿದೆ. ಹೀಗಾಗಿ, ಒಂದೆಡೆ ರೈತರು ಬಿತ್ತನೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರೆ, ಮತ್ತೊಂದೆಡೆ ಕೃಷಿ ಇಲಾಖೆ ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ದಾಸ್ತಾನು ಮಾಡಿದೆ. ಸಬ್ಸಿಡಿ ದರವನ್ನೂ ನಿಗದಿಪಡಿಸಿ, ರೈತ ಸಂಪರ್ಕ ಕೇಂದ್ರಗಳಿಗೆ ಅಗತ್ಯ ಪ್ರಮಾಣದಲ್ಲಿ ಬಿತ್ತನೆ ಬೀಜ ಪೂರೈಕೆ ಮಾಡಲಾಗಿದೆ.

ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಪೂರ್ವ ಮುಂಗಾರು ಹೆಚ್ಚಾಗಿ ಬಿದ್ದ ಹಿನ್ನೆಲೆಯಲ್ಲಿ ಈಗಾಗಲೇ ಅಲ್ಲಿ ಬಿತ್ತನೆ ಬೀಜಗಳನ್ನು ವಿತರಣೆ ಮಾಡಲಾಗುತ್ತಿದೆ. ಮುಂಗಾರು ಬಿತ್ತನೆಗಾಗಿ ಭತ್ತ, ಜೋಳ, ರಾಗಿ, ಮೆಕ್ಕೆಜೋಳ, ಸಿರಿಧಾನ್ಯ, ಹೆಸರು, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ, ಸೋಯಾ ಅವರೆ ಸೇರಿದಂತೆ ನಾನಾ ಬಿತ್ತನೆ ಬೀಜಗಳಿಗೆ ಪ್ರತಿ ವರ್ಷದಂತೆ ಈ ಬಾರಿಯೂ ಸಾಮಾನ್ಯ ವರ್ಗ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಪ್ರತ್ಯೇಕವಾಗಿ ಸಬ್ಸಿಡಿ ದರ ನಿಗದಿಪಡಿಸಿದೆ.

ರಾಜ್ಯದಲ್ಲಿ ಈ ಬಾರಿ ಮುಂಗಾರು ಹಂಗಾಮಿಗೆ 4.71 ಲಕ್ಷ ಕ್ವಿಂಟಾಲ್‌ಗೂ ಅಧಿಕ ಬಿತ್ತನೆ ಬೀಜಗಳಿಗೆ ಬೇಡಿಕೆಯಿದ್ದು, ಸದ್ಯ ರಾಜ್ಯ ಕೃಷಿ ಇಲಾಖೆಯು ನಾನಾ ಬೀಜ ನಿಗಮಗಳು ಮತ್ತು ಬೀಜೋತ್ಪಾದನಾ ಕೇಂದ್ರಗಳ ಮೂಲಕ 5.46 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜವನ್ನು ಸಂಗ್ರಹಿಸಿದೆ. 84 ಲಕ್ಷ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ.

ಕ್ಯೂಆರ್ ಕೋಡ್ ಆಧಾರಿತ ಬಿತ್ತನೆ ಬೀಜ: ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ ಕೊರತೆ ಉಂಟಾಗದಂತೆ ಕ್ರಮ ಕೈಗೊಳ್ಳಲು ಕೃಷಿ ಇಲಾಖೆ ಈಗಾಗಲೇ ಸನ್ನದ್ಧವಾಗಿದೆ. ಹಾಗೆಯೇ, ಪ್ರತಿ ವರ್ಷ ಕೆಲವು ಖಾಸಗಿ ಸಂಸ್ಥೆಗಳಿಂದ ರೈತರಿಗೆ ನಕಲಿ ಬಿತ್ತನೆ ಬೀಜಗಳ ವಿತರಣೆಯಿಂದ ಭಾರಿ ಸಮಸ್ಯೆ ಉಂಟಾಗುತ್ತಿತ್ತು. ಇದನ್ನು ತಡೆಯಲು ಕಳೆದ ಎರಡು ವರ್ಷಗಳಿಂದ ಕ್ಯೂಆರ್ ಕೋಡ್ ಆಧಾರಿತ ಗುಣಮಟ್ಟದ ಪ್ರಮಾಣೀಕೃತ ಬಿತ್ತನೆ ಬೀಜಗಳನ್ನು ವಿತರಿಸಲು ಇಲಾಖೆ ಕ್ರಮ ಕೈಗೊಂಡಿದೆ. ಪ್ರತಿ ಬಿತ್ತನೆ ಬೀಜದ ಬ್ಯಾಗ್ ಮೇಲೆ ಕ್ಯೂಆರ್ ಕೋಡ್ ಇರಲಿದ್ದು, ಇದನ್ನು ಸ್ಕ್ಯಾನ್ ಮಾಡಿದರೆ ಆ ಬೀಜದ ಪ್ರಮಾಣೀಕೃತ ಮಾಹಿತಿ ಪರಿಶೀಲಿಸುವ ತಂತ್ರಜ್ಞಾನವನ್ನೂ ಪರಿಚಯಿಸಿದೆ.

ರಸಗೊಬ್ಬರ ದಾಸ್ತಾನು: ಬರುವ ಸೆಪ್ಟೆಂಬರ್ ವರೆಗೆ 30.05 ಲಕ್ಷ ಮೆಟ್ರಿಕ್ ಟನ್‌ನಷ್ಟು ರಸಗೊಬ್ಬರದ ಅಗತ್ಯವಿದೆ. ಪ್ರತಿ ತಿಂಗಳು ಸಬ್ಸಿಡಿ ದರದಲ್ಲಿ ಕೇಂದ್ರವು ರಾಜ್ಯಕ್ಕೆ ಪೂರೈಕೆ ಮಾಡಲಿದೆ. ಸದ್ಯ 11.76 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಇದೆ.

2026ರ ಬಿತ್ತನೆ ಬೀಜದ ವಿವರ

ಬೇಡಿಕೆ: 4.71 ಲಕ್ಷ ಕ್ವಿಂಟಾಲ್‌ಗೂ ಅಧಿಕ

ದಾಸ್ತಾನು: 5.46 ಲಕ್ಷ ಕ್ವಿಂಟಾಲ್‌ಗೂ ಅಧಿಕ





ಈ ಬಾರಿ ಮುಂಗಾರಿನಲ್ಲಿ ಎಂಟು ವರ್ಷಕ್ಕಿಂತ ಕಡಿಮೆ ಅವಧಿಯ ಉದ್ದು, ಹೆಸರು ಮತ್ತು ತೊಗರಿ ದ್ವಿದಳ ಧಾನ್ಯಗಳ ಮೇಲೆ ಸಹಾಯಧನವನ್ನು ಹೆಚ್ಚಿಸಿ ಶೇ.50 ಅಥವಾ ಪ್ರತಿ ಕೆ.ಜಿಗೆ 60 ರೂಪಾಯಿ ಯಾವುದು ಕಡಿಮೆಯೋ ಅದರಷ್ಟು ಸಹಾಯಧನ ನೀಡಲಾಗುತ್ತಿದೆ.

-ಡಾ.ಜಿ.ಟಿ. ಪುತ್ರ ನಿರ್ದೇಶಕ, ರಾಜ್ಯ ಕೃಷಿ ಇಲಾಖೆ

ಬಿತ್ತನೆ ಬೀಜ ದರ ಕೆ.ಜಿ.ಗಳಲ್ಲಿ (ಸಹಾಯಧನ ಹೊರತುಪಡಿಸಿ)

ಭತ್ತ	₹42 - 48.50
ರಾಗಿ	₹69
ಮೆಕ್ಕೆಜೋಳ	₹150 - 405
ತೊಗರಿ	₹132
ಶೇಂಗಾ	₹120
ಸೋಯಾ ಅವರೆ	₹92
ಉದ್ದು	₹117.50
ಅಲಸಂದೆ	₹117.50
ಹೆಸರು	₹127

V-karnataka pg 07

ಮದರ್‌ಡೇರಿಯಿಂದ ಮಣ್ಣಿನಲ್ಲಿ ಕರಗುವ ಹಾಲಿನ ಪಾಕೆಟ್ ಬಿಡುಗಡೆ

V-karnataka pg 09

ನವದೆಹಲಿ (ಪಿಟಿಐ): ದೇಶದ ಪ್ರಮುಖ ಹಾಲು ಪೂರೈಕೆ ಕಂಪನಿ ಮದರ್ ಡೇರಿಯು, ಮಣ್ಣಿನಲ್ಲಿ ನೈಸರ್ಗಿಕವಾಗಿ ಕರಗುವ ಹಾಲಿನ ಪಾಕೆಟ್ ಅನ್ನು ಮಂಗಳವಾರ ಬಿಡುಗಡೆ ಮಾಡಿದೆ.

ಈ ಪಾಕೆಟ್ ಯಾವುದೇ ಪ್ಲಾಸ್ಟಿಕ್ ಕಣಗಳನ್ನು ಪರಿಸರದಲ್ಲಿ ಬಿಡುಗಡೆ ಮಾಡುವುದಿಲ್ಲ. ಜೂನ್ 5ರ ವಿಶ್ವ ಪರಿಸರ ದಿನದಿಂದ ಈ ಹಾಲಿನ ಪಾಕೆಟ್‌ಗಳನ್ನು ದೆಹಲಿ-ಎನ್‌ಸಿಆರ್ ಪ್ರದೇಶದ ವಿವಿಧೆಡೆ ಮಾರಾಟ ಮಾಡಲಾಗುವುದು ಎಂದು ಕಂಪನಿ ತಿಳಿಸಿದೆ.

'ಹೊಸದಾಗಿ ಪರಿಚಯಿಸಲಾಗಿರುವ ಈ ಹಾಲಿನ ಪಾಕೆಟ್ ಶತಮಾನಗಳ ಬದಲು ಕೆಲವೇ ವರ್ಷಗಳಲ್ಲಿ ಮಣ್ಣಿನಲ್ಲಿ ನೈಸರ್ಗಿಕವಾಗಿ ಕರಗುವಂತೆ ವಿನ್ಯಾಸಗೊಳಿಸಲಾಗಿದೆ. ಭೂಮಿಯನ್ನು ಸಂರಕ್ಷಿಸುವ ಬದ್ಧತೆಯನ್ನು ಕಂಪನಿ ಹೊಂದಿದೆ. ಈ ಹೊಸ ಪಾಕೆಟ್ ಗ್ರಾಹಕರ ಹಾಲಿನ ದರದ ಮೇಲೆ ಪರಿಣಾಮ ಬೀರುವುದಿಲ್ಲ' ಎಂದು ಎನ್‌ಡಿಡಿಬಿಯ ಅಧ್ಯಕ್ಷ ಮಿನೇಶ್ ಶಾ ಹೇಳಿದ್ದಾರೆ. ಮದರ್ ಡೇರಿಯು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ (ಎನ್‌ಡಿಡಿಬಿ) ಅಂಗಸಂಸ್ಥೆ.